ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ಕಾರಿಯವರ ನ್ಯಾಯಾಲಯ, ಮಡಿಕೇರಿ, ಕೊಡಗು.

ಸಿ.ಸಿ.ನಂಃ 1096/20

ಪಿಡಬ್ಲ್ಯುಃ - 11

<u>ದಿನಾಂಕಃ 30.09.2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು</u>.

<u>ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ಯವರಿಂದಃ</u> -

ದಿಃ 08.08.2020 ರಂದು ಪಂಚರಾದ ಘನ ಸಾಮ್ರಾಟ್ ಮತ್ತು ಮೊಣ್ಣಪ್ಪ ಅವರ ಸಮಕ್ಷಮ ಎರಡು ಗುದ್ದಲಿಗಳನ್ನು ವಶಕ್ಕೆ ಪಡೆದಿರುತ್ತೇನೆ. ದಿಃ 02.10.2020 ರಂದು ಮಡಿಕೇರಿ ವೈದ್ಯರಿಂದ ಗಾಯದ ದೃಢೀಕರಣದ ಬಗ್ಗೆ ಅಭಿಪ್ರಾಯವನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿ ಸದರಿ ದಾಖಲೆಯನ್ನು ನೋಡಿ ತಮ್ಮ ಸಹಿ ಗುರುತಿಸಿರುತ್ತಾರೆ. ಅದನ್ನು ನಿಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು.

<u>**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಕೆ. ಎಂ. ವಕೀಲರಿಂದಃ-**</u>

ನಿಪಿ-9 ದಾಖಲೆಯನ್ನು ಠಾಣೆಯಲ್ಲಿಯೇ ನಾವೇ ತಯಾರಿಸದ ದಾಖಲೆ ಎಂದರೆ ಹಾಗೂ ಅದರಲ್ಲಿ ತೋರಿದ ಮುದ್ದೆಮಾಲುಗಳನ್ನು ವೈದ್ಯರು ಯಾವಾತ್ತೂ ನೋಡೇ ಇಲ್ಲ ಎಂದರೆ ಸರಿಯಲ್ಲ. ನಿಪಿ-9 ನ್ನು ಈ ಪ್ರಕರಣಕ್ಕೆ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ಈ ಪ್ರಕರಣದ ಎಫ್ ಐ ಆರ್ ದಾಖಲು ಮಾಡಿದ ಹಾಗೂ ತನಿಖೆ ಪೂರ್ಣಗೊಳಿಸಿದ ಅಧಿಕಾರಿ ನಾನೇ ಎಂದರೆ ಸರಿ. ನನ್ನ ತನಿಖೆಯಲ್ಲಿ ಯಾವ ಆರೋಪಿ

ಅವಾಚ್ಯ ಶಬ್ದಗಳಿಂದ ಬೈದಿದ್ದಾರೆ, ಯಾವ ಆರೋಪಿ ಕೊಲೆ ಬೆದರಿಕೆ ಹಾಕಿದ್ದಾರೆ ಹಾಗೂ ಯಾವ ಆರೋಪಿ ಹಲ್ಲೆ ಮಾಡಿದ್ದಾರೆ ಎಂದು ನಿರ್ದಿಷ್ಟವಾಗಿ ಹೇಳಿಲ್ಲ ಎಂದರೆ ಸರಿ. ಆದರೆ ಎಲ್ಲಾ ಆರೋಪಿಗಳು ಎಲ್ಲಾ ಅಪರಾಧಗಳನ್ನು ಮಾಡಿದ್ದಾರೆ.

ನಾನು ಹೇಳುವಂತೆ ಚಾಸಾ-1 ರವರು ನಿಪಿ-1 ರಂತೆ ಯಾವುದೇ ದೂರು ನೀಡಿಲ್ಲ ಎಂದರೆ ಸರಿಯಲ್ಲ. ಸ್ಥಳ ಮಹಜರು ಮಾಡಲು ಒಂದು ದಿನ ತಡವಾಗಿದೆ ಎಂದರೆ ಸರಿ. ನನ್ನ ತನಿಖೆಯ ಪ್ರಕಾರ ಚಾಸಾ-1 ರವರು ಪ್ರಕರಣದ ಪಿರ್ಯಾದುದಾರರಾಗಿದ್ದಾರೆ. ನಿಪಿ-2 ರಲ್ಲಿ ಸ್ಥಳವನ್ನು ಪಿರ್ಯಾದುದಾರರು ತೋರಿಸಿಕೊಟ್ಟಿದ್ದಾರೆ ಎಂದು ನಮೂದು ಇದೆಯಾ ಇಲ್ಲವೋ ಎಂದರೆ ಸಾಕ್ಷಿ ಇದೆ ಎಂದು ನುಡಿಯುತ್ತಾರೆ. ನಿಮ್ಮ ಪ್ರಕಾರ ಪಿರ್ಯಾದುದಾರರು ಸ್ಥಳವನ್ನು ತೋರಿಸಿಕೊಟ್ಟಿದ್ದಾರಾ ಎಂದರೆ ಪ್ರತ್ಯಕ್ಷ ಸಾಕ್ಷಿಗಳು ತೋರಿಸಿಕೊಟ್ಟಿದ್ದಾರೆ ಆದರೆ ಕೈ ತಪ್ಪಿನಿಂದ ಪಿರ್ಯಾದರುದಾರರು ತೋರಿಸಿಕೊಟ್ಟಿದ್ದಾರೆ ಎಂದು ನಮೂದು ಆಗಿದೆ. ಮಹಜರಿನಲ್ಲಿ ಪಿರ್ಯಾದುದಾರರು ಸ್ಥಳ ತೋರಿಸಿಕೊಟ್ಟಿದ್ದಾರೆ ಎನ್ನುವುದು ಸುಳ್ಳು ಎಂದರೆ ಸಾಕ್ಷಿ ಕೈ ತಪ್ಪಿನಿಂದ ಪಿರ್ಯಾದುದಾರರು ಎಂದು ಬರೆಯಲಾಗಿದೆ ಎಂದು ನುಡಿಯುತ್ತಾರೆ.

ಸ್ಥಳಕ್ಕೆ ಹೋದಾಗ ಚರಂಡಿ ತೋಡಿದ್ದು ಇತ್ತಾ ಇದ್ದರೆ ಅದನ್ನು ಮಹಜರಿನಲ್ಲಿ ತೋರಿಸಿದ್ದೀರಾ ಎಂದರೆ ಚರಂಡಿ ಇರುವ ಬಗ್ಗೆ ಮಹಜರಿನಲ್ಲಿ ತೋರಿಸಿದ್ದೇನೆ. ಚರಂಡಿ ಎಷ್ಟು ಅಡಿ ಉದ್ದ, ಅಗಲ ಇತ್ತು ಎಂದು ಮಹಜರಿನಲ್ಲಿ ಬರೆದಿದ್ದೀರಾ ಎಂದರೆ ಬರೆದಿರುವುದಿಲ್ಲ. ಸ್ಥಳದಲ್ಲಿ ರಕ್ತದ ಕಲೆಗಳು ಇತ್ತಾ ಎಂದರೆ ಇರಲಿಲ್ಲ. ನಾನು ಸ್ಥಳಕ್ಕೆ ಹೋಗಿಲ್ಲ, ಠಾಣೆಯಲ್ಲಿ ನಿಪಿ-2 ನ್ನು ತಯಾರಿಸಿದ್ದೇನೆ ಎಂದರೆ ಸರಿಯಲ್ಲ.

ಚಾಸಾ-1 ರವರ ಹೇಳಿಕೆ ಬರೆಯುವಾಗ ಅವರು ತಮ್ಮ ರಕ್ತಸಿಕ್ತ ಬಟ್ಟೆಗಳನ್ನು ನನಗೆ ಕೊಟ್ಟಿದ್ದಾರಾ ಮತ್ತು ಅವುಗಳನ್ನು ನೀವು ನೋಡಿದ್ದೀರಾ ಎಂದರೆ ಇಲ್ಲ. ನನ್ನ ತನಿಖೆಯಲ್ಲಿ ಆ ರೀತಿಯ

ಬಟ್ಟೆಗಳನ್ನು ನಾನು ವಶಕ್ಕೆ ಪಡೆಯಲು ಪ್ರಯತ್ನ ಮಾಡಿರುವುದಿಲ್ಲ. ಚಾಸಾ-4 ರವರು ಪ್ರತ್ಯಕ್ಷ ಸಾಕ್ಷಿ ಅಲ್ಲ ಎಂದರೆ ಸರಿಯಲ್ಲ. ಚಾಸಾ-4 ರವರು ಪ್ರತ್ಯಕ್ಷ ಸಾಕ್ಷಿ ಅಲ್ಲದಿದ್ದರೂ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸಾಕ್ಷಿಗಳ ಹೇಳಿಕೆಗಳನ್ನು ಯಾವಾಗ, ಎಲ್ಲಿ ಪಡೆದಿದ್ದೆ ಎಂದು ದಿನಾಂಕ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಯಾವುದೇ ಗುದ್ದಲಿಗಳನ್ನು ಹಾಜರು ಪಡಿಸಿಲ್ಲದ ಕಾರಣ ನಾನು ಯಾವುದೇ ಅಮಾನತು ಮಹಜರು ಮಾಡಿಲ್ಲ ಎಂದರೆ ಸರಿಯಲ್ಲ. ನಾನೇ ಈ ಪ್ರಕರಣದ ಸಂಪೂರ್ಣ ತನಿಖೆ ಮಾಡಿದ್ದೇನೆ ಹಾಗೂ ಎಲ್ಲಾ ಸಾಕ್ಷಿಗಳನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿದ್ದೇನೆ ಎಂದರೆ ಸರಿ. ನಿಪಿ-5 ಮತ್ತು 7 ನ್ನು ವೈದ್ಯರಿಗೆ ನಾನುಹೇಳಿದಂತೆ ತಯಾರಿಸಲು ಹೇಳಿ ಪಡೆದಿದ್ದೇನೆ ಎಂದರೆ ಸರಿಯಲ್ಲ.

ಸಾಕ್ಷಿದಾರರ ಪಟ್ಟಿಯಲ್ಲಿ ಸಾಕ್ಷಿಗಳ ಹೆಸರು, ತಂದೆಯ ಹೆಸರು, ವಯಸ್ಸು, ವೃತ್ತಿ ಮತ್ತು ಸಂಪೂರ್ಣ ವಿಳಾಸವನ್ನು ತೋರಿಸಿದ್ದೇನೆ ಎಂದರೆ ಸರಿ. ನನ್ನ ತನಿಖೆಯ ಪ್ರಕಾರ ಚಾಸಾ-3 ರವರು ಯಾರು ಎಂದರೆ ರಾಜೇಶ್ ತಂದೆಃ ಹರಿದಾಸ್, 33 ವರ್ಷ, ಮೆಕ್ಯಾನಿಕ್, ಚೂರಿಕಾಡು ಎಂದು ಮಹಜರಿನಲ್ಲಿ ನಮೂದು ಇದೆ. ಪ್ರಾಸಾ-3 ರವರು ನಾನು ಈಗ ಹೇಳಿದ ಚಾಸಾ-3 ಅಲ್ಲ ಎಂದರೆ ತನಿಖೆ ಸಮಯದಲ್ಲಿ ವಿಳಾಸವನ್ನು ನಾನು ಬರೆದುಕೊಂಡಿದ್ದೇನೆ ಎಂದು ನುಡಿಯುತ್ತಾರೆ. ಚಾಸಾ-3 ರವರಿಗೂ ಪ್ರಸಾ-3 ರವರಿಗೂ ತಾಳೆ ಆಗುತ್ತದಾ ಎಂದರೆ ಅದರ ಬಗ್ಗೆ ನನಗೆ ಹೇಳಲು ಆಗುವುದಿಲ್ಲ. ನಾನು ಹೇಳುವಂತಹ ವ್ಯಕ್ತಿ ಪ್ರಾಸಾ-3 ಅಲ್ಲ ಹಾಗೂ ನಾನು ಸರಿಯಾಗಿ ತನಿಖೆ ಮಾಡಿಲ್ಲ ಎಂದರೆ ಸರಿಯಲ್ಲ.

ಆರೋಪಿತರಿಗೂ ದೂರುದಾರರಿಗೂ ವೈಮನಸ್ಸು ಇತ್ತಾ ಎಂದು ತನಿಖೆ ಸಮಯದಲ್ಲಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಅವರಿಬ್ಬರು ಸಂಬಂಧಿಗಳು ಎಂದು ನುಡಿಯುತ್ತಾರೆ. ಆರೋಪಿಗಳು ನಾನು ಹೇಳಿದಂತೆ ಯಾವುದೇ ಅಪರಾಧ ಮಾಡಿಲ್ಲ, ನಾನು ಅವರ ವಿರುದ್ದ ಸುಳ್ಳು ಧೋಷಾರೋಪ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಜೆಎಂಎಫ್‌ಸಿ, ಮಡಿಕೇರಿ.